NOTICE OF ADJOURNMENT MOTION

Re :—Reported Statement of Kerala Chief Ministers about boundary dispute.

ಮಾನ್ಯ ಅಧ್ಯಕ್ಷರೇ :—ಈ ದಿವಸ ನಾನೊಂದು ನಿಲುವಳಿ ಸೂಚನೆಯನ್ನು ತಮ್ಮಕಡೆಗೆ ಕಳುಹಿಸಿದ್ದೇನೆ. ನೆನ್ನೆಯ ದಿವಸ ಕೇರಳದ ಅಸೆಂಬ್ಲಿಯಲ್ಲಿ ಆಲ್ಲಿನ ಮುಖ್ಯ ಮಂತ್ರಿಗಳಾದ ಶ್ರೀ ಅಚ್ಯುತ ಮೆನನ್ ರವರು ಆಲ್ಲಿಯ ಸದಸ್ಯರಾದ ಶ್ರೀ ರಾಘವಪ್ಪ ಎನ್ನತಕ್ಕವರ ಒಂದು ಗಡೀ ಪ್ರಶ್ನೆಯ ಚರ್ಚೆಯ ಸಂದರ್ಭದಲ್ಲಿ ಕರ್ನಾಟಕ ಮತ್ತು ಕೇರಳ ರಾಜ್ಯಕ್ಕೆ ಸಂಬಂಧಪಟ್ಟಂತೆ ಯಾವ ಪ್ರಶ್ನೆಯೂ ಇರುವುದಿಲ್ಲ ಎಂದು ಉತ್ತರಿಸಿದ್ದಾರೆ. ಆದರೆ ನಾವು ಇಲ್ಲಿ ಆ ಮಹಾಜನ್ ವರದಿಯಲ್ಲಿ ಕೇರಳದಿಂದ ನಮಗೆ ಎಷ್ಟು ಪ್ರದೇಶ ಬರಬೇಕೆಂಬ ಬಗ್ಗೆ ವಾದವನ್ನು ಇಟ್ಟಿದ್ದೇವೆ. ಆದರ ಬಗ್ಗೆ ಆ ವರದಿಯಲ್ಲಿ ಆವರೂ ಅದನ್ನು ಪ್ರಸ್ತಾಪ ಮಾಡಿ ಒಂದು ಶಿಫಾರಸನ್ನು ಕೊಟ್ಟಿದ್ದಾರೆ. ಹಾಗಿರುವಾಗ ಆಲ್ಲಿನ ಮುಖ್ಯ ಮಂತ್ರಿಗಳು ಕರ್ನಾಟಕ ಮತ್ತು ಕೇರಳ ರಾಜ್ಯಕ್ಕೆ ಗಡಿಗೆ ಸಂಬಂಧಪಟ್ಟಂತೆ ಯಾವ ಪ್ರಶ್ನೆಯೂ ಇಲ್ಲ ಎಂದು ಹೇಳಿರುವುದರಿಂದ ಈ ಮಧ್ಯೆ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳಿಗೂ ಮತ್ತು ಕೇರಳದ ಮುಖ್ಯ ಮಂತ್ರಿಗಳಿಗೂ ಏನಾದ ಪತ್ರ ವ್ಯವಹಾರಗಳು ನಡೆದಿದ್ದವೇ ಏನು ಎಂಬುದನ್ನು ಈ ಸಭೆಗೆ ದಯಮಾಡಿ ತಿಳಿಸಬೇಕು.

ಶ್ರೀ ಡಿ. ದೇವರಾಜ ಅರಸ್ :—ಪತ್ರಿಕೆಯಲ್ಲಿ ಈ ವಿಚಾರದಲ್ಲಿ ಏನು ವರದಿಯಾಗಿದೆ ಎಂಬುದು ನನಗೆ ತಿಳಿಯದು. ಹಿಂದೆ ಒಂದಾವರ್ತಿ ಕೇರಳದ ಮಾನ್ಯ ಮುಖ್ಯಮಂತ್ರಿಗಳು ಭೇಟಿ ಮಾಡುವುದಕ್ಕೆ ನನಗೆ ಪತ್ರ ಬರೆದಿದ್ದರು. ಆದರ ವಿನಾ ನನಗೇನೂ ತಿಳಿಯದು. I have already explained the position to this House. I am not in a position to add any further.

ಅಧ್ಯಕ್ಷರು :—ಈ ಸೂಚನೆಗೆ ನನ್ನ ಅನುಮತಿ ಇಲ್ಲ.

INTRODUCTION OF BILLS

Madam SPEAKER :—I have received the recommendation of the Governor for introduction and consideration of the following Bills under clauses 1 and 3 of Article 207 of the Consitution of India.

(1) The Karnataka Appropriation Bill, 1974.

(2) The Karnataka Appropriation No. 2 Bill, 1974.

(3) The Karnataka Sales Tax (Amendment) Bill 1974.

(4) The Karnataka Entertainment Tax Bill 1974

(5) The Karnataka Motor Vehicles Taxation (Amendment) Bill, 1974.

Sri M. Y. GHORPADE (Minister for Finance):—Madam Speaker, I beg to introduce the following Bills :—

(1) The Karnataka Appropriation Bill, 1974

(2) The Karnataka Appropriation (No. 2) Bill, 1974

(3) The Karnataka Sales Tax (Amendment) Bill, 1974

(4) The Karnataka Entertainment Tax (Amendment) Bill 1974

Sir, on behalf of the Minister for Transport, I beg to introduce the Karnataka Motor Vehicles Taxation (Amendment) Bill, 1974.

*Madam SPEAKER :—All the Bills are introduced.

ಶ್ರೀ ಕಾಗೋಡು ತಿಮ್ಮಪ್ಪ :—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಪ್ರೊವಿಜನಲ್ ಕಲೆಕ್ಷನ್ ಆಫ್ ಟ್ಯಾಕ್ಸ್‌ಸ್ ಮಸೂದೆ ಈ ಸದನದಲ್ಲಿ ಮಾತ್ರ ಪಾಸಾಗಿದೆ. ಅದು ನಮ್ಮ ಮೇಲ್ಮನೆಯಿಂದ ಇನ್ನೂ ಪಾಸಾಗದೆ ಇರುವಾಗ ಈ ತೆರಿಗೆ ಮಸೂದೆಗಳನ್ನು ಇಲ್ಲಿ ಮಂಡಿಸುವುದಕ್ಕೆ ಹೇಗೆ ಸಾಧ್ಯ ?

ಅಧ್ಯಕ್ಷರು :—ಅದು ಎರಡೂ ಸದನಗಳಲ್ಲಿ ಪಾಸಾಗಿ ಅದಕ್ಕೆ ಅಸೆಂಟ್ ಕೂಡ ಸಿಕ್ಕಿದೆ.

ಶ್ರೀ ಎಂ. ವೈ. ಘೋರ್ಪಡೆ :—ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಆಕ್ಟ್ ಮತ್ತು ಸೇಲ್ಸ್ ಟ್ಯಾಕ್ಸ್ ಆಕ್ಟ್ ಎರಡೂ ೧೯೭೪ ರಿಂದಲೂ ಜಾರಿಯಲ್ಲಿರುತ್ತವೆ. ಈ ವಿಚಾರದಲ್ಲಿ ಒಂದು ಪ್ರೊವಿಜನಲ್ ಟ್ಯಾಕ್ಸ್ ಕಲೆಕ್ಷನ್ ಬಿಲ್ಲನ್ನು ತಂದು ನಮ್ಮ ಎರಡೂ ಸದನಗಳಲ್ಲಿ ಅದಕ್ಕೆ ಒಪ್ಪಿಗೆಯನ್ನೂ ಕೂಡ ಪಡೆದಿದ್ದಾಗಿದೆ.

Madam SPEAKER :—Motion for consideration may be moved.

KARNATAKA APPROPRIATION BILL, 1974

Motion to consider

Sri M. Y. GHORPADE :—I beg to move.

"The Karnataka Appropriation Bill, 1974 be taken into consideration."

Madam SPEAKER :—Motion moved :

"That the Karnataka Appropriation Bill, 1974 be taken into consideration.

Madam SPEAKER :—The question is ;

"That the Karnataka Appropriation Bill, 1974 be taken into consideration."

The motion was adopted

Clause 2, 3 and the Schedule.

Madam SPEAKER :—The question is ;

"That clause 2, 3 and the Scheduled do stand part of the Bill."

The motion was adopted.

Clauses 2, 3 and the Scheduled were added to the Bill.

Clause 1 etc.

Madam SPEAKER :—The question is ;

"That clause 1, the long title the Preamble and the Enacting formula do st nd part of the Bill."

---

*All the five Bills are appended as Annexure to this volume.